**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹಾಗೂ  ಜೆ ಎಂ. ಎಫ್. ಸಿ, ಮುಧೋಳ**

| | |
|---|---|
| ಸಿ.ಸಿ.ನಂ. | 376/2024 |
| ಡಿ.ಡಬ್ಲೂ | 1 |

| | | |
|---|---|---|
| ಹೆಸರು | :- | ಬಸವರಾಜ ಕಗಲಗೊಂಬ |
| ತಂದೆ/ಗಂಡನ ಹೆಸರು | :- | ಯಲ್ಲಪ್ಪ |
| ವಯಸ್ಸು | :- | 38 ವರ್ಷ |
| ಉದ್ಯೋಗ | :- | ಒಕ್ಕಲುತನ |
| ವಾಸಸ್ಥಳ | :- | ಭಂಟನೂರ |

**ಸಾಕ್ಷಿಯನ್ನು ದಿಃ31.07.2025 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು**

**ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ ರವರಿಂದ**

1. 2023 ರಲ್ಲಿ ನನ್ನ ಮಗಳು ತನುಜಾ ಇವಳನ್ನು ಹೆಬ್ಬಾಳ ಮುರಾರ್ಜಿ ಶಾಲೆಯಲ್ಲಿ ವಿದ್ಯಾಬ್ಯಾಸಕ್ಕಾಗಿ ಕಳುಹಿಸಿದ್ದೆನು. ಪಿರ್ಯಾದಿದಾರ ಸದರಿ ಶಾಲೆಯಲ್ಲಿ ಸೆಕ್ಯೂರಿಟಿ ಗಾರ್ಡ ಕೆಲಸ ಮಾಡುತ್ತಿದ್ದು, ಆದ್ದರಿಂದ ಆತನ ಮತ್ತು ನನ್ನ ಪರಿಚಯ ಆಯಿತು. ನಾನು ಪಿರ್ಯಾದಿದಾರನ ಬಳಿ 50 ಸಾವಿರ ಸಾಲ ಪಡೆದಿದ್ದು, 2 ತಿಂಗಳ ಮತ್ತೆ ಪಿರ್ಯಾದಿದಾರನಿಂದ 50 ಸಾವಿರ ರೂಪಾಯಿ ಸಾಲ ಪಡೆದೆನು. ಸಾಲ ಪಡೆಯುವಾಗ 2 ಚೆಕಗಳನ್ನು ನೀಡಿದ್ದೆನು. ಮಾತುಕತೆಯಲ್ಲಿ 1 ವರ್ಷದಲ್ಲಿ ಸದರಿ 1 ಲಕ್ಷ ಮೊತ್ತವನ್ನು ಹಿಂದಿರುಗಿಸುದಾಗಿ ನಿರ್ಣಯ ಆಗಿತ್ತು. ಹಣ ನೀಡಿದ 10 ತಿಂಗಳ ನಂತರ ನನ್ನ ಬಳಿ ಪಿರ್ಯಾದಿದಾರ ಹಣ ಹಿಂದಿರುಗಿಸಬೇಕು ಎಂದು ಬಂದಿದ್ದು, ನಾನು ಹಣ ಪಡೆದು 1 ವರ್ಷ ಮುಗಿದ ನಂತರ ಪಡೆದ ಹಣವನ್ನು ಹಿಂದಿರುಗಿಸುತ್ತೇನೆ, ಕಬ್ಬಿನ ಬಿಲ್ಲಿನ ಮೊತ್ತ ಬರುತ್ತದೆ ಎಂದು ತಿಳಿಸಿದೆನು. ಅಷ್ಟರ ಒಳಗೆ ಪಿರ್ಯಾದಿದಾರ ಈ ಪ್ರಕರಣ ಸಲ್ಲಿಸಿರುತ್ತಾನೆ. ದಿಃ20.10.2024 ರಂದು ಊರಿನಲ್ಲಿ ನಾವು ರಾಜೀ ಮಾಡಿಕೊಂಡಿದ್ದು, ನಾನು ಮನೆಯಲ್ಲಿ 1 ಲಕ್ಷ 30 ಸಾವಿರ ರೂಪಾಯಿ ಪಿರ್ಯಾದಿದಾರನಿಗೆ ನೀಡಿದ್ದೆನು. ದಿಃ21.10.2024 ರಂದು ಪಿರ್ಯಾದಿದಾರ ನ್ಯಾಯಾಲಯದಲ್ಲಿ ತನಗೆ 1 ಲಕ್ಷ 30 ಸಾವಿರ ರೂಪಾಯಿ ಬಂದಿದೆ ಎಂದು ತಿಳಿಸಿದ್ದಾನೆ. ನಾನು ಸಾಲದ ಮೊತ್ತವನ್ನು ಕಬ್ಬು ಕಟಾವು ಮಾಡಲು ಬರುವ ಗ್ಯಾಂಗಮನಗಳಿಗೆ ಹಣ ನೀಡುವ ಸಲುವಾಗಿ ಪಡೆದೆನು. ದಿಃ20.10.2024 ರಂದು ರಾಜೀ ಆಗುವಾಗ ಹಣಮಂತ ರಾಮಪ್ಪ ಅಂಬಲಜೇರಿ ಅವರು ಮನೆಗೆ ಬಂದಿದ್ದು, ನನ್ನ ಬಳಿ ಇದ್ದ 80 ಸಾವಿರ ರೂಪಾಯಿ ಮತ್ತು ಹಣಮಂತ ಅಂಬಲಜೇರಿ ಅವರ ಬಳಿ ಇದ್ದ 50 ಸಾವಿರ ರೂಪಾಯಿ ಸೇರಿಸಿ 1 ಲಕ್ಷ 30 ಸಾವಿರಗಳನ್ನು ಪಿರ್ಯಾದಿದಾರನಿಗೆ ನೀಡಿರುತ್ತೇನೆ.

ಪಿರ್ಯಾದಿದಾರ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇ ಸರಿ ಇದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ಮುಧೋಳ